# ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

[ಕರ್ನಾಟಕ ಸರ್ಕಾರದ ಸಂಪೂರ್ಣ ಸಾಮ್ಯಕ್ಕೆ ಒಳಪಟ್ಟಿದೆ]
ಕಂಪನಿ ಕಾರ್ಯಾಲಯ,
ನವನಗರ, ಪೂ.ಬೆಂ. ರಸ್ತೆ, ಹುಬ್ಬಳ್ಳಿ- 580 025.

ಹು ವಿ ಕಂ
HESCOM

# HUBLI ELECTRICITY SUPPLY COMPANY LIMITED

[Wholly owned Govt. of Karnataka undertaking]
Corporate Office,
Navanagar, P.B. Road, Hubli-580 025.

Telephone No. : 0836-2223867
Fax No. : 0836-2223865
Web Site : www.hescom.co.in
E-mail ID : gmadmhr.hescom@gmail.com


ಕ್ರಮ ಸಂಖ್ಯೆ: ಹುವಿಸಕಂನಿ/ಪ್ರವ್ಯ(ಆ)/ಲೆ(ಆ)/ಸಲೆ(ಆ)/ಆ-2/ಕಾರಕ-5382/2012-13/ C48-1351 ದಿನಾಂಕ: 15 JUL 2016

ಅಧೀಕ್ಷಕ ಇಂಜಿನೀಯರ(ವಿ),
ಕಾರ್ಯ ಮತ್ತು ಪಾಲನೆ ವೃತ್ತ,
ಹುವಿಸಕಂನಿ, ಹುಬ್ಬಳ್ಳಿ/ ಶಿರಸಿ/ ಹಾವೇರಿ/
ಬೆಳಗಾವಿ/ ಚಿಕ್ಕೋಡಿ/ ವಿಜಯಪುರ/ ಬಾಗಲಕೋಟೆ.

ಮಾನ್ಯರೇ,

ವಿಷಯ: ಕೆಲಸ ಮಾಡುವ ಸ್ಥಳಗಳಲ್ಲಿ ಮಹಿಳೆಯರ ಮೇಲೆ ನಡೆಯುವ ಲೈಂಗಿಕ ಕಿರುಕುಳ ತಡೆಯಲು ಹುವಿಸಕಂನಿದ ಕಛೇರಿಗಳಲ್ಲಿ ಆಂತರಿಕ ದೂರು ಸಮಿತಿ ರಚನೆ ಮಾಡುವ ಕುರಿತು.

ಉಲ್ಲೇಖ:
1. ಈ ಕಛೇರಿ ಸಮ ಪತ್ರ ಸಂಖ್ಯೆ: ಹೆಸ್ಕಾಂ/ ಪ್ರವ್ಯ(ಆ)/ ಲೆಅ(ಆ)/ ಹಿಸ/ ಇತರೆ/ ಕಾರಕ-5382/ 2012-13/ CYS-2544, ದಿನಾಂಕ: 31.01.2013.
2. ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ಲೈಂಗಿಕ ಕಿರುಕಳ(ತಡೆಗಟ್ಟುವಿಕೆ, ನಿಷೇಧಿಸುವಿಕೆ, ನಿವಾರಿಸುವಿಕೆ) ಅಧಿನಿಯಮ, 2013.
3. ಸರ್ಕಾರದ ಅಧೀನ ಕಾರ್ಯದರ್ಶಿ-2, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರ್ಣ ಇಲಾಖೆ ರವರ ಆದೇಶ ಸಂಖ್ಯೆ: ಮಮಇ 28 ರಾಮಆ 2015 ಬೆಂಗಳೂರು, ದಿನಾಂಕ: 18.11.2015.
4. ಈ ಕಛೇರಿ ಆಂತರಿಕ ಟಿಪ್ಪಣಿಯಲ್ಲಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರಿಂದ ನೀಡಿರುವ ಅನುಮೋದನೆ ದಿನಾಂಕ: 07.07.2016.

****

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತದಲ್ಲಿ ಕೆಲಸ ಮಾಡುತ್ತಿರುವ ಸ್ಥಳಗಳಲ್ಲಿ ಮಹಿಳೆಯರಿಗೆ ಆಗುವ ಲೈಂಗಿಕ ಕಿರುಕುಳವನ್ನು ತಡೆಗಟ್ಟಲು, ಉಲ್ಲೇಖ[1] ರ ಪತ್ರದ ಅನ್ವಯ ವೃತ್ತ ಮಟ್ಟದಲ್ಲಿ ದೂರು ನಿವಾರಣಾ ಸಮಿತಿಗಳನ್ನು ರಚಿಸಲು ನಿರ್ದೇಶಿಸಲಾಗಿರುತ್ತದೆ. ಸರ್ಕಾರದ ಅಧೀನ ಕಾರ್ಯದರ್ಶಿ-2, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರ್ಣ ಇಲಾಖೆ, ಬೆಂಗಳೂರು ರವರ ಉಲ್ಲೇಖ[3] ರ ಆದೇಶದಲ್ಲಿ ಕೆಲಸದ ಸ್ಥಳಗಳಲ್ಲಿ 10 ಮತ್ತು 10 ಕ್ಕಿಂತ ಹೆಚ್ಚು ಮಹಿಳೆಯರು ಕೆಲಸ ಮಾಡುತ್ತಿದ್ದರೆ, ಸಂಸ್ಥೆಯ ಮಾಲೀಕರು/ ಮುಖ್ಯಸ್ಥರು, ಆ ಕಛೇರಿ/ ಸಂಸ್ಥೆ/ ಅಥವಾ ಕೆಲಸದ ಸ್ಥಳಗಳಲ್ಲಿ ಒಂದು "ಆಂತರಿಕ ದೂರು ಸಮಿತಿ" ಯನ್ನು, ಕಡ್ಡಾಯವಾಗಿ ರಚನೆ ಮಾಡಲು ಆದೇಶಿಸಿರುತ್ತಾರೆ.

ಕಾರಣ, ಉಲ್ಲೇಖ[1] ರ ಪತ್ರದ ಅನ್ವಯ ವೃತ್ತ ಮಟ್ಟದಲ್ಲಿ ರಚಿಸಿರುವ ದೂರು ನಿವಾರಣಾ ಸಮಿತಿಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಗೊಳಿಸಲಾಗಿದೆ. ಉಲ್ಲೇಖ[2] ರ ಅಧಿನಿಯಮ ಮತ್ತು ಉಲ್ಲೇಖ [3] ರ ಆದೇಶದಲ್ಲಿ ನೀಡಿರುವ ಮಾರ್ಗಸೂಚಿಗಳಂತೆ ವೃತ್ತ ಮಟ್ಟದಲ್ಲಿ "ಆಂತರಿಕ ದೂರು ಸಮಿತಿ" ಯನ್ನು ತಕ್ಷಣದಿಂದ ಜಾರಿಗೆ ಬರುವಂತೆ, ರಚಿಸಲಾಗಿದೆ ಹಾಗೂ ಸದರಿ ಸಮಿತಿ ಕಾರ್ಯ ನಿರ್ವಹಿಸಲು, ಈ ಕೆಳ ಕಂಡ ಪದವೃಂದದ ಅಧಿಕಾರಿ/ ಸಿಬ್ಬಂದಿಗಳನ್ನು ನೇಮಿಸಲು ವೃತ್ತದ ಅಧೀಕ್ಷಕ ಇಂಜಿನೀಯರ್(ವಿ) ರವರುಗಳಿಗೆ ಅಧೀಕರಿಸಲಾಗಿದೆ.

| ಸಮಿತಿಯ ರಚನೆ | - | ಸಮಿತಿ |
|---|---|---|
| ಕೆಲಸದ ಸ್ಥಳದ, ಕೆಲಸಗಾರರ ಮಧ್ಯದಲ್ಲಿನ ಹಿರಿಯ ಶ್ರೇಣಿಯ ಉದ್ಯೋಗಸ್ಥ ಮಹಿಳೆ. | - | ಅಧ್ಯಕ್ಷರು |
| ಕೆಲಸಗಾರರ ನಡುವೆ/ ಸಮಾಜ ಕಲ್ಯಾಣ ಕ್ಷೇತ್ರಗಳಲ್ಲಿ ಅನುಭವ ಹೊಂದಿರುವ, ಕಾನೂನು ಜ್ಞಾನ ಹೊಂದಿರುವರು. | - | ಇಬ್ಬರು ಸದಸ್ಯರು |
| ಮಹಿಳೆಯರ ಉನ್ನತಿಗೆ ಕಾರಣರಾದ ಸಂಘ ಸಂಸ್ಥೆ ಅಥವಾ ಲೈಂಗಿಕ ಕಿರುಕುಳದ ವಿವಾದಕ್ಕೆ ಸಂಬಂಧಿಸಿದ ವಿಚಾರದಲ್ಲಿ ನುರಿತಿರುವ ಅರೆಸರ್ಕಾರಿ ಸಂಸ್ಥೆಯಿಂದ. | - | ಒಬ್ಬ ಸದಸ್ಯರು |

[ಪು.ತಿ.ನೋ.]

ಸೂಚನೆ:

1. ಸದರಿ ಸಮಿತಿಯು ಲೈಂಗಿಕ ಕಿರುಕುಳ[ತಡೆಗಟ್ಟುವಿಕೆ, ನಿಷೇಧಿಸುವಿಕೆ, ನಿವಾರಿಸುವಿಕೆ] ಅಧಿನಿಯಮ, 2013 ರ ಮೇರೆಗೆ ಕಾರ್ಯ ನಿರ್ವಹಿಸುವುದು.
2. ಸರ್ಕಾರ/ ಕವಿಪ್ರನಿನಿ/ ಹುವಿಸಕಂನಿದಿಂದ ಕಾಲ ಕಾಲಕ್ಕೆ ಹೊರಡಿಸುವ ಸುತ್ತೋಲೆ/ ಆದೇಶಗಳನ್ವಯ ಕಾರ್ಯ ನಿರ್ವಹಿಸುವುದು ಮತ್ತು ಪಾಲಿಸುವುದು.
3. ಹುಬ್ಬಳ್ಳಿ/ ಬೆಳಗಾವಿ ವಲಯ ಕಛೇರಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಮಹಿಳಾ ಸಿಬ್ಬಂದಿ/ ಅಧಿಕಾರಿಗಳು ಸಂಬಂಧಿಸಿದ ವೃತ್ತ ಸಮಿತಿಯ ವ್ಯಾಪ್ತಿಗೆ ಬರುತ್ತಾರೆ.
4. ಸಮಿತಿ ರಚನೆ ಮಾಡಿದ ನಂತರ ಸಮಿತಿ ಸದಸ್ಯರುಗಳ ಹೆಸರು ಮತ್ತು ವಿಳಾಸವನ್ನು ತಿಳಿಸುವ ಕುರಿತು ಕಛೇರಿಯ ಆದೇಶವನ್ನು ಮತ್ತು ತಿಳುವಳಿಕೆ ಪತ್ರವನ್ನು ಹೊರಡಿಸಬೇಕು. ಈ ವಿಚಾರವನ್ನು ತಮ್ಮ ವೃತ್ತ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ನೌಕರರ ಗಮನಕ್ಕೆ ತರಬೇಕು.
5. ಸಮಿತಿಯ ಅಧ್ಯಕ್ಷರು/ ಸದಸ್ಯರು ವರ್ಗಾವಣೆಗೊಂಡಲ್ಲಿ/ ಬಿಟ್ಟು ಹೊದಲ್ಲಿ ರಿಕ್ತ ಸ್ಥಾನಕ್ಕೆ ಅಧ್ಯಕ್ಷರು/ ಸದಸ್ಯರಗಳನ್ನು ನೇಮಿಸುವುದು ಮತ್ತು ಸಮಿತಿಯನ್ನು ಕಾಲ ಕಾಲಕ್ಕೆ ನಿಯಮಾನುಸಾರ ಪುನರ ರಚಿಸುವುದು.

ವೃತ್ತದ ಕಾರ್ಯ ವ್ಯಾಪ್ತಿಯಲ್ಲಿ, ಮಹಿಳಾ ಉದ್ಯೋಗಿಗಳಿಂದ ಯಾವುದೇ ದೂರುಗಳು ಬಂದಲ್ಲಿ, ಅವುಗಳನ್ನು ಕೂಲಂಕುಷವಾಗಿ ವಿಚಾರಣೆ ನಡೆಸಿ, ತೆಗೆದುಕೊಂಡ ನಿರ್ಣಯದ ಕುರಿತು ವರದಿಯನ್ನು ಕ್ಷಿಪ್ರವಾಗಿ ಈ ಕಛೇರಿಗೆ ಮಾಹಿತಿಗಾಗಿ ಮತ್ತು ವಾರ್ಷಿಕ ವರದಿಯನ್ನು ಈ ಕಛೇರಿಗೆ ಹಾಗೂ ಸ್ಥಳೀಯ ಸಮಿತಿಯ ಜಿಲ್ಲಾ-ಅಧಿಕಾರಿ[District Officer] ಗೆ ಕಳುಹಿಸುವಂತೆ ಸೂಚಿಸಲು, ನಿರ್ದೇಶಿತಳಾಗಿದ್ದೇನೆ.

ತಮ್ಮ ವಿಶ್ವಾಸಿ,

ಪ್ರಧಾನ ವ್ಯವಸ್ಥಾಪಕರು
[ಆಡಳಿತ ಮತ್ತು ಮಾಸಂಅ]

<u>ಪ್ರತಿಯನ್ನು ದಯಾಪರರ ಮಾಹಿತಿಗಾಗಿ ಸಲ್ಲಿಸಿದೆ:</u>

1. ಜಿಲ್ಲಾಧಿಕಾರಿಗಳು, ಧಾರವಾಡ/ ಗದಗ/ ಹಾವೇರಿ/ ಉತ್ತರ ಕನ್ನಡ ಜಿಲ್ಲೆ/ ಬೆಳಗಾವಿ/ ವಿಜಯಪುರ/ ಬಾಗಲಕೋಟೆ.
2. ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ, ನಿಗಮ ಕಾರ್ಯಾಲಯ, ಕಾವೇರಿ ಭವನ, ಬೆಂಗಳೂರು.
3. ನಿರ್ದೇಶಕರು[ಆಡಳಿತ ಮತ್ತು ಮಾಸಂ], ಕವಿಪ್ರನಿನಿ, ನಿಗಮ ಕಾರ್ಯಾಲಯ, ಕಾವೇರಿ ಭವನ, ಬೆಂಗಳೂರು.
4. ನಿರ್ದೇಶಕರು[ತಾಂತ್ರಿಕ], ಕಂಪನಿ ಕಾರ್ಯಾಲಯ, ಹುವಿಸಕಂನಿ, ಹುಬ್ಬಳ್ಳಿ.

<u>ಪ್ರತಿ:</u>

5. ಮುಖ್ಯ ಇಂಜಿನೀಯರ(ವಿ), ಹುಬ್ಬಳ್ಳಿ/ ಬೆಳಗಾವಿ ವಲಯ, ಹುವಿಸಕಂನಿ, ಹುಬ್ಬಳ್ಳಿ/ ಬೆಳಗಾವಿ.
6. ಮುಖ್ಯ ಆರ್ಥಿಕ ಅಧಿಕಾರಿ, ಕಂಪನಿ ಕಾರ್ಯಾಲಯ, ಹುವಿಸಕಂನಿ, ಹುಬ್ಬಳ್ಳಿ.
7. ನಿಯಂತ್ರಣಾಧಿಕಾರಿ[ಆಂ.ಪ]/ [ಲೆ & ಕಂ], ಕಂಪನಿ ಕಾರ್ಯಾಲಯ, ಹುವಿಸಕಂನಿ, ಹುಬ್ಬಳ್ಳಿ.
8. ಎಲ್ಲಾ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾರ್ಯ ಮತ್ತು ಪಾಲನೆ ವಿಭಾಗ, ಹುವಿಸಕಂನಿ,_________.
9. ಆಪ್ತ ಕಾರ್ಯದರ್ಶಿ[ವ್ಯ.ನಿ], ಕಂಪನಿ ಕಾರ್ಯಾಲಯ, ಹುವಿಸಕಂನಿ, ಹುಬ್ಬಳ್ಳಿ - ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಇವರ ಗಮನಕ್ಕೆ ತರಲು ಕೋರಿದೆ.
10. ಎಲ್ಲಾ ಲೆಕ್ಕಾಧಿಕಾರಿ[ಆಂ.ಪ], ಕಾರ್ಯ ಮತ್ತು ಪಾಲನೆ ವಿಭಾಗ, ಹುವಿಸಕಂನಿ,_________.
11. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾರ್ಯ ಮತ್ತು ಪಾಲನೆ ಉಪ ವಿಭಾಗ, ಹುವಿಸಕಂನಿ,_________.
12. ಎಲ್ಲಾ ಶಾಖಾಧಿಕಾರಿ, ಕಾರ್ಯ ಮತ್ತು ಪಾಲನೆ ಶಾಖೆ, ಹುವಿಸಕಂನಿ._________.
13. ಕಛೇರಿ ಪ್ರತಿ/ ಮಹಾ ಕಡತ.